**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಒಎಸ್ 125/2021</u>**

**<u>ಪಿಡಬ್ಲ್ಯೂ 1</u>**

**<u>ಸಾಕ್ಷಿಯನ್ನು ದಿನಾಂಕ 31.07.2023 ರಂದು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ಶ್ರೀ ಎಂ.ಸಿ.ಕೆ ವಕೀಲರಿಂದ ವಾದಿ ಪರ ವಕೀಲರುಃ</u>**

ನಾನು ಪ್ರತಿವಾದಿಗಳ ವಿರುದ್ದ ವಿಭಾಗಕ್ಕಾಗಿ ದಾವೆ ಹೂಡಿದ್ದೇನೆ. ಪ್ರತಿವಾದಿಗಳಾದ 2 ಮತ್ತು 3 ನೇ ತಾತನ ಮಕ್ಕಳ ವಿರುದ್ದ ದಾವೆ ಹೂಡಿದ್ದೇನೆ. 2 ನೇ ತಾತನ ಹೆಸರು ಚಿಕ್ಕೇಗೌಡ. ಚಿಕ್ಕೇಗೌಡನ ಮಕ್ಕಳು ಪ್ರತಿವಾದಿ 1 ರಿಂದ 3. 3 ನೇ ತಾತನ ಮಕ್ಕಳು ರಂಗೇಗೌಡ, ಗೌರಮ್ಮ ಮತ್ತು ಕುಳ್ಳಮ್ಮ. 3 ನೇ ತಾತನ ಮಕ್ಕಳು ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಮೊದಲನೇ ತಾತನ ಹೆಸರು ಬುಂಡೇಗೌಡ, ನಾನು ಅವರ ಮೊಮ್ಮಗ.

2. ನನಗೆ ದಾವಾ ಸ್ವತ್ತುಗಳಲ್ಲಿ 1/3 ಭಾಗ ಆಸ್ತಿ ಬರಬೇಕೆಂದು ದಾವೆ ಹೂಡಿದ್ದೇನೆ. ದಾವಾ 4 ಐಟಂಗಳ ಮೇಲೆ ದಾವೆ ಹೂಡಿದ್ದೇನೆ. ದಾವಾ ಐಟಂ ನಂ.1, ಸ.ನಂ.151/2 ದಾವಾ ಐಟಂ 2 ಸ.ನಂ.151/1. ವಿಸ್ತೀರ್ಣ 1 ಎಕರೆ 20 ಗುಂಟೆ ಅಥವಾ 1 ಎಕರೆ 30 ಗುಂಟೆ ಇರಬಹುದು. ದಾವಾ ಐಟಂ 3 151/3 ಬಿ ರಲ್ಲಿ ಎಷ್ಟು ವಿಸ್ತೀರ್ಣಕ್ಕೆ ದಾವೆ ಹೂಡಿದ್ದೀರಾ ಎಂದರೆ ದಾಖಲೆಗಳಲ್ಲಿ ಬರೆಸಿದ್ದೇವೆ ಎಲ್ಲವೂ ನೆನಪಿಲ್ಲ ಅಂದಾಜು ಒಂದೂವರೆ ಎಕರೆ ಎಂದು ಸಾಕ್ಷಿಯು ನುಡಿಯುತ್ತಾರೆ. ದಾವಾ ಐಟಂ 4 ಸ.ನಂ.151/3 ಸಿ, 30 ಗುಂಟೆ. ದಾವಾ ಸ್ವತ್ತುಗಳಲ್ಲಿ 4 ಐಟಂಗಳಲ್ಲಿ ವಾದಿ ಹಾಗೂ ಪ್ರತಿವಾದಿಗಳೆಲ್ಲರೂ ಒಟ್ಟಿಗೆ ಸಾಗುವಳಿ ಮಾಡುತ್ತಿದ್ದೇವೆ. ಪಹಣಿಯಲ್ಲಿ ಎಲ್ಲರ ಹೆಸರು ಜಂಟಿಯಾಗಿ ಬಂದಿಲ್ಲ. ಸಾಕ್ಷಿ ಮುಂದುವರೆದು ನಮಗೆ ಮೋಸ ಮಾಡಿ ನಮ್ಮ ಹೆಸರು ಬಂದಿಲ್ಲ ಎಂದು ನುಡಿಯುತ್ತಾರೆ.

3. ನನ್ನ ತಂದೆ ದಿಃ 23.08.2014 ರಂದು ಮಿರ್ಲೆಯಲ್ಲಿ ಮೃತಪಟ್ಟಿದ್ದಾರೆ. ರಾಮಾಪುರ ಮತ್ತು ಕರ್ಪೂರವಳ್ಳಿ ಗ್ರಾಮ ಬಿಟ್ಟು ನಾನು ಹಾಗೂ ನನ್ನ ತಂದೆ ಸುಮಾರು ವರ್ಷದ ಹಿಂದೆ ಮಿರ್ಲೆಗೆ ಬಂದೆವು. ಸಾಕ್ಷಿ ಮುಂದುವರೆದು ನನ್ನ ತಾತ ಅಲ್ಲೆ ಇದ್ದರು ಎಂದು ನುಡಿಯುತ್ತಾರೆ. ನಾವು ವಲಸೆ ಬಂದಾಗ ನಮ್ಮ ತಾತನಿಗೆ ಅಂದಾಜು 80 ವರ್ಷ

ವಯಸ್ಸಾಗಿತ್ತು. ಆ ಸಮಯದಲ್ಲಿ ನನ್ನ ತಾತನಿಗೆ ನೋಡಿಕೊಳ್ಳಲು ಯಾರು ಇರಲಿಲ್ಲ ಎಂದರೆ ನನ್ನ ತಂದೆ ಹೋಗಿ ಬಂದು ಮಾಡುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

4. ವಲಸೆ ಬರುವುದಕ್ಕೂ ಮುನ್ನ ಸ.ನಂ.151 ಇನ್ನೂ ಪೋಡು ಆಗಿರಲಿಲ್ಲ ಆಗ ಬುಂಡೇಗೌಡ, ಶೆಟ್ಟಿಗೌಡ ಹಾಗೂ ಚಿಕ್ಕೇಗೌಡರ ನಡುವೆ ವಿಭಾಗವಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ವಿಭಾಗವಾಗಿರುವುದು ಶೆಟ್ಟಿಗೌಡ ಹಾಗೂ ಚಿಕ್ಕೇಗೌಡರ ನಡುವೆ ಆಗಿರುವುದು ನನ್ನ ತಾತ ಅಲ್ಲ ಎಂದು ನುಡಿಯುತ್ತಾರೆ.

5. ದಾವಾ ಐಟಂ ನಂ.1 ಮೂಲತಃ ಸ.ನಂ.56 ಆಗಿದ್ದು ಅದು ಚಿಕ್ಕೇಗೌಡರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸ.ನಂ.151 ಮೂಾಲತಃ 6 ಎಕರೆ 24 ಗುಂಟೆ ಜಮೀನು ಎಂದರೆ ಇರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. 6 ಎಕರೆ 24 ಗುಂಟೆ ಜಮೀನನ್ನು ಬುಂಡೇಗೌಡ, ಚಿಕ್ಕೇಗೌಡ ಮತ್ತು ಶೆಟ್ಟಿಗೌಡ ತಲಾ 2 ಎಕರೆ 8 ಗುಂಟೆಯಂತೆ ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

6. ನನ್ನ ತಾತ ಬುಂಡೇಗೌಡರವರ ಭಾಗಕ್ಕೆ ಬಂದ 2 ಎಕರೆ 8 ಗುಂಟೆ ಜಮೀನನ್ನು ಅವರು ರಾಂಪುರದ ರಾಚೇಗೌಡರವರಿಗೆ ಕ್ರಯ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮಗೆ ಊರಿನಲ್ಲಿ ಜಮೀನು ಮಾಡಲು ಇರಲಿಲ್ಲ ಆದ್ದರಿಂದ ನಾವು ಕುಟುಂಬ ಸಮೇತ ಮಿರ್ಲೆಗೆ ವಲಸೆ ಬಂದೆವು ಎಂದರೆ ಸರಿಯಲ್ಲ.

7. ಮೌಖಿಕ ವಿಭಾಗದಲ್ಲಿ ಬಂದಂತಹ ತಲಾ 2 ಎಕರೆ 8 ಗುಂಟೆ ಜಮೀನಿಗೆ ಚಿಕ್ಕೇಗೌಡ ಮತ್ತು ಶೆಟ್ಟಿಗೌಡ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ವಿಭಾಗವೇ ಆಗಿಲ್ಲ ಆದರೆ 2 ಎಕರೆ 9 ಗುಂಟೆ ಜಮೀನಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ವಿಭಾಗ ಆಗದೆ ಇದ್ದರೆ ನನ್ನ ತಾತ ರಾಂಪುರದ ರಾಜೇಗೌಡರವರಿಗೆ ಅವರಿಗೆ ಬಂದ ಭಾಗ 2 ಎಕರೆ 8 ಗುಂಟೆಯನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮಾರಾಟವಾಗಿರುವ ಕಾರಣ ನಾವು ಯಾವುದೇ ಸ್ವತ್ತಿನಲ್ಲೂ ಈಗ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ.

8. ದಾವಾ ಐಟಂ ಎ ರಲ್ಲಿ 1 ಮತ್ತು 2 ನೇ ಪ್ರತಿವಾದಿ, ಬಿ ರಲ್ಲಿ 4 ರಿಂದ 6 ನೇ ಪ್ರತಿವಾದಿ, ಸಿ ರಲ್ಲಿ 1 ರಿಂದ 3 ನೇ ಪ್ರತಿವಾದಿ ಮತ್ತು ಡಿ ರಲ್ಲಿ 4 ರಿಂದ 6 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ನಾವು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ಸ್ವಾಧೀನದ ಮೇರೆಗೆ ಅವರವರ ಹೆಸರಿಗೆ ಖಾತೆ ಪಹಣಿ ಬಂದಿದೆ ಎಂದರೆ ಸರಿಯಲ್ಲ.

9. ದಾವಾ ಐಟಂ ಎ ಚಿಕ್ಕೇಗೌಡರ ಸ್ವಯಾರ್ಜಿತ ಆಸ್ತಿ ಆಗಿದ್ದು ನಾವು ವಲಸೆ ಬಂದ ಕಾರಣ ಜಮೀನಿನಲ್ಲಿ ಸುಮ್ಮನೆ ಉಳುಮೆ ಮಾಡಿಕೊಂಡು ಇರಲಿ ಎಂದು ನಮಗೆ ನೀಡಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನನ್ನ ತಾತ ಬುಂಡೇಗೌಡ ಮೃತಪಟ್ಟಿದ್ದು ನಮಗೆ ಚಿಕ್ಕೇಗೌಡ ನೀಡಿದ ದಾವಾ ಐಟಂ ಎ ಯನ್ನು ಚಿಕ್ಕೇಗೌಡರ ಮಕ್ಕಳಾದ 1 ರಿಂದ 3 ನೇ ಪ್ರತಿವಾದಿಗಳಿಗೆ ದಿಃ 30.08.1992 ರಂದು 40 ಸಾವಿರ ರೂ ಹಣ ಪಡೆದು ಅವರಿಗೆ ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಅಂದಿನಿಂದಲೂ 1 ರಿಂದ 3 ನೇ ಪ್ರತಿವಾದಿ ದಾವಾ ಐಟಂ ಎ ಯಲ್ಲಿ ಇಂದಿನವರೆಗೂ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಅವರು ಸ್ವಾಧೀನದಲ್ಲಿ ಇರುವ ಕಾರಣ ದಿಃ 08.05.2020 ರಂದು ಸಾಲಿಗ್ರಾಮ ಪೋಲಿಸ್ ಠಾಣೆಗೆ 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ನಾನು ದೂರು ನೀಡಿ ಸ್ವಾಧೀನ ಬಿಡಿಸಿ ಕೊಡಿ ಎಂದು ದೂರು ನೀಡಿದ್ದೆ ಎಂದರೆ ನಮಗೆ ಗೊತ್ತಿಲ್ಲದೆ ಮರಗಿಡಗಳನ್ನು ಕಡಿದು ಹಾಕಿದ್ದರಿಂದ ಅವರ ವಿರುದ್ಧ ದೂರು ನೀಡಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಈ ಸಂಬಂದ ದಿಃ 16.05.2020 ರಂದು ನನ್ನ ಹಾಗೂ ಪ್ರತಿವಾದಿಗಳ ಜಂಟಿ ಹೇಳಿಕೆಯನ್ನು ಪೋಲಿಸರು ಪಡೆದಿದ್ದಾರೆ ಎಂದರೆ ಸರಿ. ಅದೇ ದಿನ ನನಗೆ ಹಿಂಬರಹ ನೀಡಿದ್ದಾರೆ ಎಂದರೆ ಸರಿ. ಸದರಿ ಹಿಂಬರಹದಲ್ಲಿ 1 ರಿಂದ 3 ನೇ ಪ್ರತಿವಾದಿ 40 ವರ್ಷಗಳಿಂದ ದಾವಾ ಐಟಂ ಎ ನಲ್ಲಿ ಸ್ವಾಧೀನದಲ್ಲಿದ್ದಾರೆ ಆದ್ದರಿಂದ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ನಮೂದು ಇದೆ ಎಂದರೆ ನನಗೆ ಹೆದರಿಸಿ ಹೇಳಿಕೆ ಪಡೆದಿದ್ದಾರೆ ಎಂದು ಸಾಕ್ಷಿಯ ನುಡಿಯುತ್ತಾರೆ.

10. ದಿಃ 02.12.2020 ರಂದು ಪೋಲಿಸರು ಸ್ಥಳಕ್ಕೆ ಹೋಗಿ ಸುಮಾರು 100 ಜನ ಗ್ರಾಮಸ್ಥರ ಜಂಟಿ ಹೆಳಿಕೆ ಪಡೆದು ಅದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಸ್ವಾಧೀನವನ್ನು ಬಲವಂತವಾಗಿ ಬಿಡಿಸಲು ಗ್ರಾಮಸ್ಥರು ಹಾಗೂ ಪೋಲಿಸರು ನನಗೆ ನೆರವು ನೀಡಿಲ್ಲ ಆದ್ದರಿಂದ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ